Sri Kadidal MANJAPPA.—It is left to the discretion of the local engineers. They can entrust the work on piecemeal basis or on the basis of estimated repairs.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಇದನ್ನು ಪೀಸ್. ವರ್ಕ್ ಮೇಲೆ ಕೊಟ್ಟಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಎಸ್ಟಿಮೇಟ್ ಆಗಿರುವ ರೇಟ್ ಮೇಲೆ ಕೊಟ್ಟಿದೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಇದನ್ನು ಟೆಂಡರ್ ಕರೆದು ಕೊಟ್ಟಿದ್ದರೆ ಇನ್ನೂ ಸೇಕಡ 25, 30 ಕಡಮೆ ಬೀಳುತ್ತಿತ್ತೆಂಬುದು ತಮಗೆ ಗೊತ್ತೇ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಶ್ರೀ ಪುಟ್ಟ ಗಂಗಯ್ಯ ಎನ್ನುವವರಿಗೆ ಕೊಟ್ಟಿದೆಯೆಂದು ಹೇಳಿದ್ದೀರಿ. ಎಗ್ಸಿಕ್ಯೂಟಿವ್ ಎಂಜಿನಿಯರು ಹೇಳಿದ್ದರ ಮೇಲೆ ತಾನೆ ಅವರಿಗೆ ಕೊಟ್ಟಿದ್ದು ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಇದಕ್ಕೆ ಜನಗಳಿಂದ ಏನಾದರೂ ಟೆಂಡರು ಕರೆಯಲಿಲ್ಲವೆಂದು ಹೇಳಿ ಆಕ್ಷೇಪಣೆಗಳು ಸರ್ಕಾರಕ್ಕೆ ಬಂದಿವೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಸರ್ಕಾರಕ್ಕೆ ಬಂದಿದ್ದ ಹಾಗೆ ನೆನಪಿಲ್ಲ.

Water Supply in Kunigal Town

Q.—648. Sri T. N. MUDLAGIRI GOWDA (Kunigal).—

Will the Government be pleased to state :—

(*a*) the quantity of water supplied to Kunigal Town under the water supply scheme ;

(*b*) the population of Kunigal Town ;

(*c*) (i) the amount deposited in Government by the Municipality for borewells and tanks ;

(ii) when the amount was deposited ;

(*d*) when the borewell pump to Kunigal Municipality will be supplied ?

A.—Sri Kadidal MANJAPPA (Minister for Revenue and Public Works).—

(*a*) 22,000 gallons per day.

(*b*) 8,902 (as per Census of 1951).

(*c*) (i) Rs. 7,000 for sinking two additional bore-wells.

(ii) During December 1951 and April 1952.

(*d*) After about 8 to 9 months' time a drill can be sent to Kunigal as it is the nineteenth work in the priority list. Pumps will have to be supplied after the bore-wells are sunk and yield tested.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಕುಣಿಗಲ್ ಟೌನಿನಲ್ಲಿ ಒಳ್ಳೆಯ ನೀರು ಸಿಕ್ಕದೆ ಜನರಿಗೆ ಮಲೇರಿಯಾ ಹೆಚ್ಚಾಗಿ ತಗಲಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಮಲೇರಿಯಾ ಹೆಚ್ಚಾಗಿ ಬಂದಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿಲ್ಲ ; ನೀರಿನ ಅಭಾವವಿದೆಯೆಂದು ಗೊತ್ತಾಗಿದೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಎಲ್. ಎಸ್. ಜಿ. ಮಂತ್ರಿಗಳು ಕುಣಿಗಲ್ ಟೌನನ್ನು inspection ಮಾಡುವ ಕಾಲದಲ್ಲಿ 20—30 ಕಡೆ ಸಾಲುಗಟ್ಟಲೆ ಪಾತ್ರೆಗಳನ್ನಿಟ್ಟುಕೊಂಡು ನೀರಿಗೆ ತೊಂದರೆಪಡುತ್ತಿರುವುದನ್ನು ಕಂಡಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿದೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಪ್ರೈಯಾರಿಟಿ ಲಿಸ್ಟಿನಲ್ಲಿ ಇದು 19ನೆಯದು ಎಂದು ಹೇಳಿದ್ದೀರಿ. ಇಲ್ಲಿನ ನೀರಿನ ವ್ಯವಸ್ಥೆಗೆ ಪ್ರೈಯಾರಿಟಿ ಕೊಟ್ಟ ಡ್ರಿಲಿಂಗ್ ಮೆಷಿನನ್ನು ಬೇಗ ತರಿಸಿಕೊಡುವುದಕ್ಕೆ ಸಾಧ್ಯವೇ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲೇ ಹೇಳಿದ್ದೇನೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಇನ್ನು 8—9 ತಿಂಗಳಾಗುತ್ತದೆಂದು ಹೇಳಿದ್ದೀರಿ. ಇನ್ನೂ ಜಾಗ್ರತೆ ತರಿಸಿಕೊಡುವುದಕ್ಕೆ ಸಾಧ್ಯವೇ ?

ಶ್ರೀ ಕಡಿದಾಳ್ ಮಂಜಪ್ಪ.—ಆದಷ್ಟು ಜಾಗ್ರತೆ ಕುಣಿಗಲ್ ತಾಲ್ಲೂಕಿಗೆ ಡ್ರಿಲಿಂಗ್ ಮೆಷೀನನ್ನು ಕಳುಹಿಸಿ ಕೊಡುತ್ತೇವೆ.

Restoration of Kembalalu tank in Kunigal Taluk.

Q.—650. Sri T. N. MUDLAGIRI GOWDA (Kunigal).—

Will the Government be pleased to state :—

(*a*) the number of minor and major tanks in Gulur and Hebbur Hoblis of Tumkur Taluk and Kottagere and Kasaba Hobly of Kunigal Taluk ;

(*b*) the total extent of the atchkat behind all these tanks ;

(*c*) the names of tanks restored during the last five years ;

(*d*) the capacity of Kembalalu Tank ; the extent of land under cultivation in the atchkat of this Tank ;

(*e*) since how many years the raiyats under this tank are requesting Government to restore this tank in view of the fact that it is being silted with sand ?